# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/06/2020-21 ದಿನಾಂಕ : 19/12/2020

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 19/12/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ರಂಗನಾಥ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ಬಾಬುರೆಡ್ಡಿ, ಸಹಾಯಕ ಅಭಿಯಂತರರು, ವಿದ್ಯುತ್
4. ಶ್ರೀ ನಾರಾಯಣಸ್ವಾಮಿ, Livestoke Officer
5. ಶ್ರೀ ಭಾರ್ಗವ್, ಹಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಕೆ.ನಂಜೇಗೌಡ, ತೆರಿಗೆ ನಿರೀಕ್ಷಕರು
7. ಕು|| ಕಾವ್ಯ, ಸಹಾಯಕ ಅಭಿಯಂತರರು
8. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ರಂಗನಾಥ್, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು**

ಸಪ್ತಗಿರಿ ಬಡಾವಣೆ, ಬಿ.ಇ.ಎಲ್ ಬಡಾವಣೆಯಲ್ಲಿ ಒಣ ತ್ಯಾಜ್ಯ ವಿಲೇವಾರಿ ಕಾರ್ಯ ಸಮರ್ಪಕವಾಗಿರುವುದಿಲ್ಲ, ಗಣೇಶ ನಗರದಲ್ಲಿ ಹಸಿ ತ್ಯಾಜ್ಯ ಸಂಗ್ರಹಣೆ ಕಾರ್ಯ ನಿಗಧಿತ ಸಮಯದಲ್ಲಿ ನಡೆಯುತ್ತಿಲ್ಲ, ಬ್ಲಾಕ್‌ಸ್ಪಾಟ್‌ಗಳ ಸಂಖ್ಯೆಯನ್ನು ನಿಯಂತ್ರಿಸಲು ಕೋರಿದರು.

ಕ್ರಮ: ಸ.ಕಾ.ಅ, ಘ.ತ್ಯಾ.ನಿ

ಬಿ.ಇ.ಎಲ್ ಬಡಾವಣೆ ಹಾಗೂ ದುರ್ಗಾ ಪರಮೇಶ್ವರಿ ದೇವಸ್ಥಾನದ ಹತ್ತಿರ ಬೀದಿ ದೀಪಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲ

ಕ್ರಮ: ಸ.ಅ, ವಿದ್ಯುತ್

ಬಿ.ಇ.ಎಲ್ ಬಡಾವಣೆ 3ನೇ ಬ್ಲಾಕ್, 6ನೇ ಮುಖ್ಯರಸ್ತೆಯಲ್ಲಿ ಅಪಘಾತಗಳು ಸಂಭವಿಸದಂತೆ ಉಬ್ಬನ್ನು (Hump) ಅಳವಡಿಸಲು ಕೋರಿರುತ್ತಾರೆ.

ಕ್ರಮ: ಟ್ರಾಫಿಕ್ ಇಂಜಿನಿಯರ್ ಸೆಲ್

ಕೆಂಪೇಗೌಡನಗರದಲ್ಲಿ ಒಳಚರಂಡಿ ಕಾಮಗಾರಿ ಪ್ರಾರಂಭಿಸದೆ ಇರುವ ಬಗ್ಗೆ, ವಿರೂಪಾಕ್ಷಪುರ ಮುಖ್ಯ ರಸ್ತೆಯಲ್ಲಿ ಒಳಚರಂಡಿಪೈಪ್ ಲೈನ್ ಇರುವ ರಸ್ತೆಯು ಕುಗ್ಗಿ ರಸ್ತೆ ಮಟ್ಟಕ್ಕಿಂತ ಕೆಳಗಡೆ ಇರುವುದರಿಂದ ಸರಿಪಡಿಸಲು ಕೋರಿದರು. ವಾರಕ್ಕೆ 2 ಬಾರಿ ಕಾವೇರಿ ನೀರಿನ ಪೂರೈಕೆಯಾಗುತ್ತಿದ್ದು, ವಿದ್ಯುತ್ ವ್ಯತ್ಯಯ ಉಂಟಾದಲ್ಲಿ ಸರಿಯಾಗಿ ನೀರು ಪೂರೈಕೆಯಾಗದೆ ಇರುವುದರಿಂದ ಸರಿಪಡಿಸಲು, ಗುರುದರ್ಶನ್ ಲೇಔಟ್ ಒಳಚರಂಡಿ ಲೈನ್ ಹಾಳಾಗಿರುವುದಾಗಿ ಸರಿಪಡಿಸಲು ಕೋರಿದರು.
ಕ್ರಮ: ಬಿಡಬ್ಲ್ಯೂ.ಎಸ್.ಎಸ್.ಬಿ

ಕೆನರಾ ಬ್ಯಾಂಕ್ ಲೇಔಟ್, ಹೆಚ್.ಎಂ.ಟಿ ಬಡಾವಣೆ 5ನೇ ಬ್ಲಾಕ್, 2ನೇ ಮುಖ್ಯ ರಸ್ತೆ, ನಿವೇಶನ ಸಂಖ್ಯೆ 881 ಮತ್ತು 882ರ ಮುಂಭಾಗ, ಹೆಚ್.ಎಂ.ಟಿ ಬಡಾವಣೆ 5ನೇ ಬ್ಲಾಕ್, 12ನೇ ಮುಖ್ಯ ರಸ್ತೆ, ಸ್ವತ್ತಿನ ಸಂಖ್ಯೆ 746, ಹೆಚ್.ಎಂ.ಟಿ ಲೇಔಟ್ 2ನೇ ಬ್ಲಾಕ್, 3ನೇ ಅಡ್ಡರಸ್ತೆ ಸ್ವತ್ತಿನ ಸಂಖ್ಯೆ 187ರ ಮುಂಭಾಗ ಹಾಗೂ ಜ್ಞಾನೇಶ್ವರಿ ಬಡಾವಣೆಯಲ್ಲಿ, ಟೆಲಿಕಾಂ ಲೇಔಟ್ 6ನೇ ಬ್ಲಾಕ್, ಬೃಹದಾಕಾರದ ಹಾಗೂ ಒಣಗಿದ ಮರವಿರುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಹಾನಿಯಾಗುವ ಸಾಧ್ಯತೆಯಿರುವುದಾಗಿ ದೂರು ನೀಡಿರುತ್ತಾರೆ.
**ಕ್ರಮ:** ಅರಣ್ಯಾಧಿಕಾರಿಗಳು, ಯಲಹಂಕ ವಲಯ

**ನೋಡೆಲ್ ಅಧಿಕಾರಿ:** ವಾರ್ಡ್ ವ್ಯಾಪ್ತಿಯ ನಿರಾಶಿತರ ಸರ್ವೇ ಮಾಡಲು ಇಚ್ಛೆಯಿಂದ ಎನ್.ಜಿ.ಓ /ವಸತಿ ಕ್ಷೇಮಾಭಿವೃದ್ಧಿ ಸಂಘದವರು ಸಹಕಾರ ನೀಡಲು ಹಾಗೂ ಕೋವಿಡ್ –19 ರೋಗದ ತಡೆ ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ಆದಷ್ಟು ಎಚ್ಚರಿಕೆಯಲ್ಲಿ ಇರುವುದರಿಂದ ಕೋವಿಡ್–19 ರೋಗವನ್ನು ನಿಯಂತ್ರಣದಲ್ಲಿಡಲು ಅನುಕೂಲವಾಗುತ್ತದೆಂದು ತಿಳಿಸಿದರು.

ಶ್ರೀ ಶಿವಕುಮಾರ್ ಗೌಡರ್, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

Assistant Executive Engineer
Vidyaranyapura Sub Division
BBMP, Bangalore-97

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.